# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂ: ಅ.ಅ.(ಪ)/ಕಾ.ಆ/ಪಿಆರ್/ 59 /2012-13

ಅಧೀಕ್ಷಕ ಅಭಿಯಂತರರು (ಪಶ್ಚಿಮ) ರವರ ಕಛೇರಿ,
ಭಾಷ್ಯಂ ಪಾರ್ಕ್, ಸೌತ್ ಸೆಂಟ್ರಲ್ ಸ್ಟ್ರೀಟ್,
ಸಂಪಿಗೆ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು-20
ದಿನಾಂಕ: 12-10-2012

## ಪರಿಷ್ಕೃತ ಕಾರ್ಯಾದೇಶ-3

ವಿಷಯ : ವಾಡ್ ಸಂಖ್ಯೆ: 140ರಲ್ಲಿ ಈ ಹಿಂದೆ ಒದಗಿಸಿದ್ದ ಸಾರ್ವಜನಿಕ ಮೂತ್ರಾಲಯ ಮತ್ತು ಶೌಚಾಲಯಗಳನ್ನು ನೀರಿನ ಟ್ಯಾಂಕರನ್ನು ಉಪಯೋಗಿಸಿಕೊಂಡು ಸ್ವಚ್ಛಗೊಳಿಸಲು ಪರ್ಯಾಯವಾಗಿ (ಬದಲಿಗೆ) ನಿಯೋಜಿಸುವ ಬಗ್ಗೆ.

ಉಲ್ಲೇಖ: 1. ಈ ಕಛೇರಿ ಕಾರ್ಯಾದೇಶ ಸಂಖ್ಯೆ: ಅ.ಅ.(ಪ)/ಪಿಆರ್/194/11-12, ದಿನಾಂಕ: 4-10-2011
2. ಈ ಕಛೇರಿ ಕಾರ್ಯಾದೇಶ-2 ರ ಸಂಖ್ಯೆ: ಅ.ಅ(ಪ)/ಪಿಆರ್/43/12-13, ದಿನಾಂಕ: 25-05-2012
3. ಅಪರ ಆಯುಕ್ತರು (ಪಶ್ಚಿಮ)ರವರ ದಿನಾಂಕ: 28-09-2012ರ ಆದೇಶ.

***********

ಪಶ್ಚಿಮ ವಲಯದ ವಾರ್ಡ್ ಸಂಖ್ಯೆ: 46, 47, 48 ರಲ್ಲಿ ಸಾರ್ವಜನಿಕ ಮೂತ್ರಾಲಯ ಮತ್ತು ಶೌಚಾಲಯಗಳನ್ನು ನೀರಿನ ಟ್ಯಾಂಕರನ್ನು ಉಪಯೋಗಿಸಿಕೊಂಡು ಸ್ವಚ್ಛಗೊಳಿಸುವ ಕೆಲಸ ನಿರ್ವಹಿಸುತ್ತಿರುವ ಗುತ್ತಿಗೆದಾರರಾದ ಶ್ರೀ. ಕೆ. ಶಿವಕುಮಾರ್ ರವರಿಗೆ ಉಲ್ಲೇಖ (2)ರಂತೆ ಗುತ್ತಿಗೆ ಆಧಾರದ ಮೇಲೆ ಕಾರ್ಯಾದೇಶ ನೀಡಲಾಗಿತ್ತು, ಆದರೆ ವಾರ್ಡ್ ಸಂಖ್ಯೆ: 47 ಮತ್ತು 48 ಗಳು ದಕ್ಷಿಣ ವಲಯಕ್ಕೆ ಸೇರುವುದರಿಂದ ಸದರಿ ವಾರ್ಡ್‌ಗಳ ಸಾರ್ವಜನಿಕ ಶೌಚಾಲಯ/ಮೂತ್ರಾಲಯಗಳ ಬಗ್ಗೆ ದಕ್ಷಿಣ ವಲಯದಲ್ಲಿ ಕ್ರಮತೆಗೆದುಕೊಳ್ಳಬೇಕಾಗಿರುತ್ತದೆ. ಆದ್ದರಿಂದ ಸದರಿ ಗುತ್ತಿಗೆಯನ್ನು ಉಲ್ಲೇಖ (3)ರ ಅಪರ ಅಯುಕ್ತರು (ಪಶ್ಚಿಮ)ರವರ ಆದೇಶದನ್ವಯ ಉಲ್ಲೇಖ (2)ರ ಕಾರ್ಯಾದೇಶವನ್ನು ರದ್ದುಪಡಿಸಿ, ಪರ್ಯಾಯವಾಗಿ (ಬದಲಿಗೆ) ಪಶ್ಚಿಮ ವಲಯ ವ್ಯಾಪ್ತಿಯ ವಾರ್ಡ್ ಸಂಖ್ಯೆ: 140 (ಹಳೇ ವಾರ್ಡ್ ಸಂಖ್ಯೆ: 46)ರ ಸಾರ್ವಜನಿಕ ಮೂತ್ರಾಲಯ ಮತ್ತು ಶೌಚಾಲಯಗಳನ್ನು ನೀರಿನ ಟ್ಯಾಂಕರನ್ನು ಉಪಯೋಗಿಸಿಕೊಂಡು ಸ್ವಚ್ಛಗೊಳಿಸುವ ಕಾರ್ಯಕ್ಕಾಗಿ ಗುತ್ತಿಗೆದಾರರಾದ ಶ್ರೀ. ನಾಗೇಶ್ವರ ರಾವ್ ಅಪರ ಆಯುಕ್ತರು (ಪಶ್ಚಿಮ)ರವರ ಆದೇಶದಂತೆ ಪ್ರತಿ ತಿಂಗಳಿಗೆ ರೂ. 42000/-ಗಳಂತೆ (ನಲವತ್ತೆರಡು ಸಾವಿರ ರೂಪಾಯಿಗಳು ಮಾತ್ರ) ನಿಗಧಿಪಡಿಸಿ, ದಿನಾಂಕ: 16-10-2012 ರಿಂದ ಅನ್ವಯವಾಗುವಂತೆ ಟೆಂಡರ್ ಕರೆಯುವವರೆಗೆ ಅಥವಾ ಮುಂದಿನ ಆದೇಶದವರೆಗೆ ಈ ಕೆಳಕಂಡ ಷರತ್ತಿನೊಂದಿಗೆ ತಾತ್ಕಾಲಿಕವಾಗಿ ನಿಯೋಜಿಸಿ ಆದೇಶಿಸಲಾಗಿದೆ. ಇದೊಂದು ಪರ್ಯಾಯ (ಬದಲಿ) ವ್ಯವಸ್ಥೆಯಾಗಿದ್ದು, ಹೆಚ್ಚಿನ ಆರ್ಥಿಕ ಹೊರೆ ಇರುವುದಿಲ್ಲ.

### ಷರತ್ತುಗಳು

1. ಗುತ್ತಿಗೆದಾರರು ಕೆಲಸಕ್ಕಾಗಿ ನೇಮಕ ಮಾಡಿಕೊಳ್ಳುವ ವ್ಯಕ್ತಿಗಳಿಗೆ ಕನಿಷ್ಟ ವಯಸ್ಸು 18ವರ್ಷ ತುಂಬಿರಬೇಕು ಹಾಗೂ 55 ವರ್ಷ ಮೀರಿರಬಾರದು, ಆರೋಗ್ಯ ಮತ್ತು ಸಧೃಢ ಕಾರ್ಮಿಕರನ್ನು ಮಾತ್ರ ನೇಮಿಸತಕ್ಕದ್ದು, 18 ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನ ಯಾವುದೇ ವ್ಯಕ್ತಿಯನ್ನು ಕೆಲಸಕ್ಕೆ ನೇಮಿಸಿಕೊಳ್ಳಬಾರದು.
2. ಕೇವಲ 2 ಪುರುಷ ಕೆಲಸಗಾರರನ್ನು ಮಾತ್ರ ನೇಮಿಸತಕ್ಕದ್ದು, ಆದರೆ ಪಾಲಿಕೆಯ ಪೌರಕಾರ್ಮಿಕರನ್ನು ಕೆಲಸಕ್ಕೆ ನಿಯೋಜಿಕೊಳ್ಳಬಾರದು.
3. ಕೆಲಸಗಾರರಿಗೆ ನೇರಳೆ ಬಣ್ಣದ ಮೇಲು ಹೊದಿಕೆ (ಏಪ್ರಾನ್) ಒದಗಿಸತಕ್ಕದ್ದು.
4. ಸ್ವಚ್ಛಗೊಳಿಸುವ ಕೆಲಸಕ್ಕೆ ವಾಟರ್ ಟ್ಯಾಂಕರ್ ಗೈರುಹಾಜರಾದಲ್ಲಿ ಮಾಸಿಕ ಮೊತ್ತದ ಬಿಲ್ಲಿನಲ್ಲಿ ಸರಾಸರಿ ದಿನದ ಲೆಕ್ಕ ಹಾಕಿ ಆ ದಿನದ ಮೊತ್ತವನ್ನು ಕಟಾವು ಮಾಡಲಾಗುವುದು.

ಮು.ತಿ.ನೋ.

5. ಸಾರ್ವಜನಿಕರಿಂದ ಸ್ವಚ್ಛತೆ ಬಗ್ಗೆ ಯಾವುದೇ ದೂರು ಬಾರದಂತೆ ನೋಡಿಕೊಳ್ಳುವುದು.
6. ವಾಹನದ ಮುಂದೆ ವಾಹನದ ಸಂಖ್ಯೆ: ವಾರ್ಡ್ ಸಂಖ್ಯೆ: ವಲಯದ ಹಾಗೂ ಬಿ.ಬಿ.ಎಂ.ಪಿ. ಎಂದು ಕಡ್ಡಾಯವಾಗಿ ಬರೆಯಬೇಕು.
7. ಪ್ರತಿನಿತ್ಯ ವಾರ್ಡ್‌ಗಳಲ್ಲಿ ಸಾರ್ವಜನಿಕ ಶೌಚಾಲಯ ಹಾಗೂ ಮೂತ್ರಾಲಯವನ್ನು ಬ್ಲೀಚಿಂಗ್ ಪೌಡರ್‌ನಿಂದ ಸ್ವಚ್ಛಗೊಳಿಸುವುದು ಹಾಗೂ 10 ದಿನಗಳಿಗೊಮ್ಮೆ ಆಸಿಡ್‌ನಿಂದ ಸ್ವಚ್ಛಗೊಳಿಸುವುದು.
8. ಕೆಲಸ ನಿರ್ವಹಿಸುವ ಪೂರ್ಣ ಜವಾಬ್ದಾರಿ ಗುತ್ತಿಗೆದಾರರದ್ದಾಗಿರುತ್ತದೆ.
9. ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸದೇ ಇದ್ದಲ್ಲಿ ಗುತ್ತಿಗೆದಾರರನ್ನು ಯಾವುದೇ ಮುನ್ಸೂಚನೆ ಇಲ್ಲದೆ ರದ್ದುಗೊಳಿಸಲಾಗುವುದು.

12/10/12
ಅಧೀಕ್ಷಕ ಅಭಿಯಂತರರು (ಪಶ್ಚಿಮ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ರವರಿಗೆ,

ಶ್ರೀ. ನಾಗೇಶ್ವರ ರಾವ್,
ನಂ. 50, ಹೆಚ್ ಬ್ಲಾಕ್,
ಹಳೇ ಸವಾರ್ ಲೇನ್, ಶೇಷಾದ್ರಿಪುರಂ,
ಬೆಂಗಳೂರು – 560 020.

ಪ್ರತಿಯನ್ನು,

1. ಅಪರ ಆಯುಕ್ತರು (ಪಶ್ಚಿಮ)ರವರ ಅವಗಾಹನೆಗೆ ಸಲ್ಲಿಸಿದೆ.
2. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಚಾಮರಾಜಪೇಟೆ ಉಪ-ವಿಭಾಗರವರ ಮಾಹಿತಿಗಾಗಿ.
3. ಸಹಾಯಕ ಹಣಕಾಸು ನಿಯಂತ್ರಕರು (ಪಶ್ಚಿಮ)ರವರ ಮಾಹಿತಿಗಾಗಿ ರವಾನಿಸಿದೆ.